ಲಿಖಿತ ಮೂಲಕ ಉತ್ತರಿಸುವ

ಕರ್ನಾಟಕ ವಿಧಾನ ಪರಿಷತ್ತು

ನೂರ ಮೂವತ್ತೆಂಟನೆಯ ಅಧಿವೇಶನ

ಬುಧವಾರ, ದಿನಾಂಕ : 24ನೇ ಜುಲೈ, 2019

21. ಬರಗಾಲ ಆಗಿರುವ ತಾಲ್ಲೂಕುಗಳಲ್ಲಿ ಕೈಗೊಂಡ ಕ್ರಮದ ಬಗ್ಗೆ

ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-

576 (604) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕಾರವಾರ ಜಿಲ್ಲೆಯಲ್ಲಿ ಆಗಿರುವ ಮಳೆಯ ಪ್ರಮಾಣವೆಷ್ಟು ; ಯಾವ ಯಾವ ಭಾಗದಲ್ಲಿ ಮಳೆಯ ಕೊರತೆಯಾಗಿದೆ ; ಬರಗಾಲ, ತೀವ್ರ ಬರಗಾಲ ಪೀಡಿತ ತಾಲ್ಲೂಕುಗಳ ಸಂಖ್ಯೆ ಎಷ್ಟು; (ಹೆಸರು ಸಹಿತ ವಿವರ ಒದಗಿಸುವುದು)

(ಆ) ಬರ ನಿರ್ವಹಣೆಗೆ ಕೈಗೊಡಿರುವ ಶಾಶ್ವತ ಪರಿಹಾರ ಕಾರ್ಯಕ್ರಮಗಳಾವುವು ; ರಾಜ್ಯ ಹಾಗೂ ಕೇಂದ್ರ ಸರ್ಕಾರದಿಂದ ಬಿಡುಗಡೆ ಮಾಡಿರುವ ಆರ್ಥಿಕ ನೆರವು ಎಷ್ಟು ;

(ಇ) ಜನ-ಜಾನುವಾರುಗಳಿಗೆ ಕುಡಿಯುವ ನೀರು ಹಾಗೂ ಅಂತರ್ಜಲ ವೃದ್ಧಿಸಲು ನಿರ್ಮಿಸಿರುವ ಗೊಕಟ್ಟೆ (ಕಂಠ) ಮತ್ತು ಇಂಗು ಗುಂಡಿಗಳೆಷ್ಟು ನಿರ್ಮಾಣಕ್ಕೆ ನೀಡಲಾಗುತ್ತಿರುವ ಹಣವೆಷ್ಟು ;

(ಈ) ರಾಜ್ಯದ ಸರಾಸರಿ ಕೃಷಿ ಆದಾಯ ಎಷ್ಟು ; ಪ್ರತಿ ರೈತರ ಸರಾಸರಿ ಆದಾಯ ಎಷ್ಟು ; ಲಭ್ಯವಿರುವ ಕೃಷಿ ಭೂಮಿ ಹಾಗೂ ಬೇಡಿಕೆ ಎಷ್ಟಿದೆ ?